**ಸಾಕ್ಷಿಗೆ ದಿನಾಂಕಃ02-07-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ಪ್ರತಿವಾದಿಗಳ ಪರ ಶ್ರೀ. BPR ವಕೀಲರಿಂದ ::**

ನಮ್ಮ ಕುಟುಂಬದ ಹೆಸರು ಛಲವಾದಿ ಆಗಿರುತ್ತದೆ. ನನ್ನ ಅಜ್ಜ ಕೆಂಚಣ್ಣ ಆಗಿರುತ್ತಾರೆ ಎಂದರೆ ಸರಿ. ಅವರಿಗೆ ಒಟ್ಟು 4 ಜನ ಮಕ್ಕಳಿದ್ದು ಅವರ ಹೆಸರುಗಳು ನನ್ನ ತಂದೆ ಚನ್ನವೀರಪ್ಪ, ಕಲ್ಲಪ್ಪ, ನಂಜುಂಡಪ್ಪ ಹಾಗೂ ಸಿದ್ದಪ್ಪ ಆಗಿರುತ್ತದೆ. ನನಗೆ ಕೆ ಸಿ ರುದ್ರಪ್ಪ, ಈರಮ್ಮ, ಕಾಳಮ್ಮ, ಕೆ ಸಿ ಬಸವರಾಜಪ್ಪ, ಶಿವಮ್ಮ ಹಾಗೂ ಕೆ ಸಿ ಹಾಲಪ್ಪ ಎನ್ನುವ ಸಹೋದರ ಸಹೋದರಿಯರು ಇರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯು ನಮ್ಮ ಕುಟುಂಬದ ಪಿತ್ರಾರ್ಜಿತವಾಗಿ ಬಂದ ಆಸ್ತಿ ಆಗಿರುತ್ತದೆ ಎಂದರೆ ಸಾಕ್ಷಿಯು ನನ್ನ ತಂದೆ ನನ್ನ ಅಜ್ಜ ಅಂದರೆ ನನ್ನ ತಂದೆಯವರು ದತ್ತಕ ಪಡೆದಿದ್ದ ಈರಜ್ಜ ರವರು ದಾನಪತ್ರ ಮುಖಾಂತರ ನೀಡಿರುವ ಕಾರಣ ಅದನು ಅವರ ಸ್ವಯಾರ್ಜಿತ ಆಸ್ತಿ ಆಗಿರುತ್ತದೆ. ನನ್ನ ತಂದೆಯನ್ನು ಈರಜ್ಜ ರವರು ದತ್ತಕ ಪಡೆದ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. 1962 ರಲ್ಲಿ ಆ ರೀತಿ ದತ್ತಕ ತೆಗೆದುಕೊಂಡಿರುತ್ತಾರೆ.

ನನ್ನ ಸಹೋದರ ರುದ್ರಪ್ಪ ರವರು ನನ್ನ ವಿರುದ್ದ ಹಾಗೂ ನನ್ನ ಉಳಿದ ಸಹೋದರ ಸಹೋದರಿಯರ ವಿರುದ್ದ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯ ತರೀಕೆರೆಯಲ್ಲಿ ಕುಟುಂಬದ ಆಸ್ತಿಗಳ ವಿಭಾಗ ಕೋರಿ ಅಸಲು ದಾವಾ 10/2015 ಅನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿನ ತೀರ್ಪನ್ನು ನಾನು ಓದಿ ನೋಡಿರುತ್ತೇನೆ. ಸಾಕ್ಷಿಗೆ ಅಸಲು ದಾವಾ 10/2015 ರಲ್ಲಿನ ತೀರ್ಪು ಹಾಗೂ ಡಿಕ್ರಿಗಳ ದೃಡೀಕೃತ ನಕಲುಗಳನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ಒಪ್ಪಿದ ಕಾರಣ ಅದನ್ನು ನಿಡಿ1 ಮತ್ತು 2. ಸದರಿ ದಾವೆಯಲ್ಲಿ ಆದ ತೀರ್ಪಿನ ವಿರುದ್ದ ಅದರ ವಾದಿಗಳು RFA ನಂಬರ್ 934/2022 ರಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು ಅದು ಈಗ ವಿಚಾರಣೆಯಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಅಸಲು ದಾವಾ 10/2015 ರಲ್ಲಿ ಆದ ತೀರ್ಪು ಮತ್ತು ಡಿಕ್ರಿಯ ವಿರುದ್ದ ತಡೆಯಾಜ್ಞೆ ನೀಡಿರುತ್ತದೆ ಎಂದರೆ ಸಾಕ್ಷಿಯು ಸದರಿ ತಡೆಯಾಜ್ಞೆಯು ಪ್ರಸ್ತುತದಲ್ಲಿ ಚಾಲ್ತಿಯಲ್ಲಿ ಇರುವುದಿಲ್ಲ ಎಂದು

ನುಡಿಯುತ್ತಾರೆ. ಈಗ ಹೇಳಿದ ಪ್ರಕರಣದಲ್ಲಿನ ತಡೆಯಾಜ್ಞೆಯು ಈಗಲೂ ಸಹ ಚಾಲ್ತಿಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಅಸಲು ದಾವಾ 10/2015 ರಲ್ಲಿ ಈ ದಾವೆಯಲ್ಲಿನ ದಾವಾ ಆಸ್ತಿಯನ್ನು ಎಲ್ಲರಿಂದಲೂ ಪಡೆದುಕೊಳ್ಳಬೇಕು ಎಂದು ಆದೇಶವಾಗಿರುತ್ತದೆ ಎಂದರೆ ಸರಿಯಲ್ಲ. ಅಸಲು ದಾವಾ 10/2015 ರ ಆಧಾರದಲ್ಲಿ ಅಮಲ್ಜಾರಿ ಪ್ರಕರಣವನ್ನು ಸಲ್ಲಿಸಿ ದಾವಾ ಆಸ್ತಿಯ ಸ್ವಾಧೀನವನ್ನು ಪಡೆದಿರುತ್ತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನ್ಯಾಯಾಲಯದ ಆದೇಶದ ಮೇರೆಗೆ ನಾನು ಸ್ವಾಧೀನವನ್ನು ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಸ್ವಾಧೀನವನ್ನು ನಾನು ಪಡೆದಿರುತ್ತೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಅಸಲು ದಾವಾ 10/2015 ರ ತೀರ್ಪಿನ ವಿರುದ್ದ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುವ ಕಾರಣ ನನಗೆ ದಾವಾ ಆಸ್ತಿಯ ಮೇಲೆ ಯಾವುದೇ ಸ್ವಾಧೀನ ಅಥವಾ ಹಕ್ಕು ಪ್ರಸ್ತುತದಲ್ಲಿ ಇರಲು ಸಾಧ್ಯ ಇಲ್ಲ ಎಂದರೆ ಸರಿಯಲ್ಲ. ಅಸಲು ದಾವಾ 10/2015 ರ ತೀರ್ಪಿನಲ್ಲಿ ನಾನು ಇತರೇ ಪಕ್ಷಗಾರರಿಂದ ಈ ದಾವೆಯ ದಾವಾ ಶೆಡ್ಯೂಲ್ ಸ್ವತ್ತಿನ ಸ್ವಾಧೀನವನ್ನು ನಾನು ಪಡೆದುಕೊಳ್ಳಬೇಕೆಂದು ಆದೇಶ ಇದೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತು ಇವತ್ತಿಗೂ ಸಹ ನಮ್ಮ ಒಟ್ಟು ಕುಟುಂಬದ ಸ್ವತ್ತು ಆಗಿದ್ದು ಅದರಲ್ಲಿ ನಾನು ಮತ್ತು ಇತರೇ ಕುಟುಂಬದ ಸದಸ್ಯರು ಜಂಟಿ ಸ್ವಾಧೀನದಲ್ಲಿ ಇರುತ್ತೇವೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತಿನ ಮೇಲೆ ನಮ್ಮ ಕುಟುಂಬದ ಸದಸ್ಯರೆಲ್ಲರಿಗೂ ಸಹ ನಿಹಿತ ಹಿತಾಸಕ್ತಿ ಇರುವ ಕಾರಣ ಈ ದಾವೆಯಲ್ಲಿ ಕೇಳಿರುವ ಪರಿಹಾರವನ್ನು ಪಡೆದುಕೊಳ್ಳಲು ನಾನು ಅರ್ಹನಾಗಿರುವುದಿಲ್ಲ ಎಂದರೆ ಸರಿಯಲ್ಲ.

ದೇವಿರಮ್ಮ ಎನ್ನುವವರು ನನಗೆ ಅತ್ತಿಗೆ ಆಗಬೇಕು. ಸದರಿಯವರು ನನ್ನ ವಿರುದ್ದ ಬೀರೂರು ಪೊಲೀಸ್ ಠಾಣೆಯಲ್ಲಿ ಒಂದು ದೂರನ್ನು ನೀಡಿದ್ದರು ಎಂದರೆ ಸರಿ. ಸದರಿ ದೂರಿನ ಅನ್ವಯ ಪೊಲೀಸರು ನ್ಯಾಯಾಲಯದ ಆದೇಶವಾಗುವವರೆಗೂ ಎಲ್ಲಾ ಕುಟುಂಬದ ಸದಸ್ಯರು ದಾವಾ ಶೆಡ್ಯೂಲ್ ಸ್ವತ್ತಿನ ಜಂಟಿ ಸ್ವಾಧೀನದಲ್ಲಿ ಇರುವಂತೆ ನಮಗೆ ಬುದ್ಧಿ ಹೇಳಿ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ನ್ಯಾಯಾಲಯದ ಆದೇಶದಂತೆ ನಾನು ಇದುವರೆಗೂ ದಾವಾ ಆಸ್ತಿಯ ಸ್ವಾಧೀನವನ್ನು ಕಾನೂನು ರೀತಿಯಲ್ಲಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಇದುವರೆಗೂ ದಾವಾ ಶೆಡ್ಯೂಲ್ ಸ್ವತ್ತು ನಮ್ಮ ಒಟ್ಟು ಕುಟುಂಬದ ಆಸ್ತಿಯಾಗಿ

ಉಳಿದಿರುವ ಕಾರಣ ನನಗೆ ಅದರ ಮೇಲೆ ವೈಯಕ್ತಿಕ ಹಕ್ಕು ಅಥವಾ ಸ್ವಾಧೀನ ಇರಲು ಸಾಧ್ಯ ಇಲ್ಲ ಎಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ ನ್ಯಾಃ

ತರೀಕೆರೆ.

ಸಾಕ್ಷಿಯ ಸಹಿ: